ಅ) ಬೆಂಗಳೂರು, ಬೆಳಗಾವಿ, ಬಳ್ಳಾರಿ, ಬಿಜಾಪುರ, ಚಿತ್ರದುರ್ಗ, ಚಿಕ್ಕಮಂಗಳೂರು, ಹಾಸನ, ಕೋಲಾರ, ಕೊಡಗು, ರಾಯಚೂರು, ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿರುವ ೧೯ ಮಿನು ವಂರಿ ಉತ್ಪಾದನಾ ವಂತ್ರ ಸಾಕಾಣಿಕೆ ಕೇಂದ್ರಗಳಲ್ಲದೆ, ೧೩ ಜಲಾಶಯಂಗಳಲ್ಲಿ ಮತ್ತು ೩೫ ಕೆರೆಗಳಲ್ಲಿ ಕಾರ್ಯವನ್ನು ನಡೆಸುತ್ತಿದೆ.

ಇ) ೧೯೮೭-೮೮ನೇ ಸಾಲಿನಲ್ಲಿ, ಉತ್ಪಾದನಾ ಪೂಡಿದ ಮಿನುಮರಿಯಂ ಪ್ರಮಾಣ ೧,೩೦೧.೪೪ ಲಕ್ಷಗಳು. ಇದರ ಪೈಕಿ ೨೬೪.೭೭ ಲಕ್ಷ ಮಿನುವಂರಿಗಳ ಮಾರಾಟದಿಂದ ಬಂದ ಆದಾಯ ರೂ. ೨೯.೮೭ ಲಕ್ಷಗಳು. ಇದಲ್ಲದೆ, ಕೆರೆ ಮತ್ತು ಜಲಾಶಯಂಗಳಲ್ಲಿ ಹಿಡಿದ ಮಿನಿನ ಪ್ರಮಾಣ ೮೫೫.೦೨ ಮೆಟ್ರಿಕ್ ಟನ್‌ಗಳು ಮತ್ತು ಇದರ ಮಾರಾಟದಿಂದ ಬಂದ ಆದಾಯ ರೂ. ೩.೦೮ ಲಕ್ಷಗಳು. ಹೀಗಾಗಿ ೧೯೮೭-೮೮ನೇ ಸಾಲಿನಲ್ಲಿ ಒಟ್ಟು ಆದಾಯ ರೂ. ೩೨.೯೫ ಲಕ್ಷಗಳಾಗಿರುತ್ತದೆ. ೧೯೮೭-೮೮ನೇ ಸಾಲಿನ ಲೆಕ್ಕಪತ್ರಗಳು ಇನ್ನೂ ಆಡಿಟ್ ಆಗಿರುವುದಿಲ್ಲ. ಆದಾಗ್ಯೂ ಪ್ರಸಕ್ತ ಸಾಲಿನಲ್ಲಿ ಆದ ಅಂದಾಜು ನಷ್ಟ ರೂ. ೧೩.೪೪ ಲಕ್ಷಗಳು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪ್ರವಾಹ ಕುರಿತಂ

೧೯೩೨. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಕಂದಾಯ, ಯೋಜನಾ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿರಂತರ ಪ್ರವಾಹ ಬರುವ ನದಿಗಳು ಯಾವುವು ?

ಆ) ಈ ನದಿ ಪ್ರವಾಹಗಳಿಂದ ನಷ್ಟಕ್ಕೊಳಗಾಗಿರುವ ಆಸ್ತಿ-ವಾಸ್ತಿಗಳ ವಾರ್ಷಿಕ ಅಂದಾಜು ಮೊತ್ತವೆಷ್ಟು ?

ಇ) ಈ ನದಿ ಪ್ರವಾಹದಿಂದ ಸಾರ್ವಜನಿಕರ ಆಸ್ತಿ-ವಾಸ್ತಿಗಳನ್ನು ರಕ್ಷಸಲು ಸರ್ಕಾರದವರಂ ಕೈಗೊಂಡಿರುವ ಶಾಶ್ವತ ಪರಿಹಾರದ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳು).-

ಅ) ನೇತ್ರಾವತಿ, ಮೂಲ್ಕಿ, ಉದ್ಯಾವರ, ಸೀತಾ, ಸ್ವರ್ಣ, ಹಾಲಾಡಿ, ಕೊಲ್ಲೂರಂ ಮತ್ತು ಗುರುಪುರ ನದಿಗಳು.

ಆ) ೧೯೮೭-೮೮ ರಲ್ಲಿ ಸುಮಾರು ೦.೯೩ ಲಕ್ಷ ರೂಪಾಯಿಗಳು.

ಇ) ಕೆಲವು ತಾತ್ಕಾಲಿಕ ಪರಿಹಾರ ಕಾಮಗಾರಿಗಳನ್ನು ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ (ಐಡಿಡಬ್ಲ್ಯುಜೆಆರ್) ಕೈಗೊಳ್ಳಲಾಗಿದ್ದು, ಶಾಶ್ವತ ಪರಿಹಾರ ಕಾಮಗಾರಿಗಳ ಮಾಸ್ಟರ್ ಪಾ ನ್ ತಯಾರಿಸಲಾಗುತ್ತಿದೆ.

ಸಣ್ಣ ನೀರಾವರಿ ಕಾಮಗಾರಿಗಳ ವೆಚ್ಚದ ಬಗ್ಗೆ

೧೯೩೭. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಕಂದಾಯ, ಯೋಜನಾ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫-೮೬ನೇ ಸಾಲಿನಿಂದ ೧೯೮೭-೮೮ನೇ ಸಾಲಿನವರೆಗೆ ಸಣ್ಣ ನೀರಾವರಿ ಯೋಜನೆಗೆ ರಾಜ್ಯದಲ್ಲಿ ಪ್ರತಿವರ್ಷ ಖರ್ಚು ಮಾಡಿರುವ ಹಣದ ಜಿಲ್ಲಾವಾರು ವಿವರ ನೀಡುವುದೇ ?

ಆ) ೧೯೮೭-೮೮ನೇ ಸಾಲಿನಲ್ಲಿ ಈ ಯೋಜನೆ ಅನ್ವಯ ಮಂಜೂರಾಗಿರುವ ಕಾಮಗಾರಿಗಳ ಸಂಖ್ಯೆಯ ಜಿಲ್ಲಾವಾರು ವಿವರ ನೀಡುವುದು, ಅದಕ್ಕಾಗಿ ವಿಂಸಲಾಗಿಟ್ಟಿರುವ ಹಣದ ಮೊತ್ತವೆಷ್ಟು ?